ಕಚೇರಿಗೆ ಹಾಜರಾಗಿದ್ದೆ. ಉಪ ಸಂಪಾದಕ ಹುದ್ದೆಯ ಸಂದರ್ಶನಕ್ಕೂ ಮುನ್ನ ಲಿಖಿತ ಪರೀಕ್ಷೆ ಇತ್ತು. ಯಾವುದೋ ಸುದ್ದಿ ಸಂಸ್ಥೆಯ ಇಂಗ್ಲಿಷ್ ಲೇಖನವನ್ನು ಕನ್ನಡಕ್ಕೆ ಅನುವಾದಿಸಲು ಹೇಳಿದ್ದರು.

ಪತ್ರಿಕಾ ಕಚೇರಿಯ ಡೆಸ್ಕ್‌ನಲ್ಲಿ ಕುಳಿತು ಬರೆಯುವಾಗ ಅಲ್ಲಿನ ಉದ್ಯೋಗಿಗಳು ಕುತೂಹಲದಿಂದ ಇಣುಕಿ, ಮೆಲುದನಿಯಲ್ಲಿ ಮೆಚ್ಚುಗೆಯ ಮಾತನಾಡುತ್ತಿದ್ದರು. ಅವರು ಹೋಗಿ ಮತ್ತೊಬ್ಬರನ್ನು ನೋಡಲು ಕಳಿಸುತ್ತಿದ್ದರು. ಅಲ್ಲಿಯೂ ಎಂದಿನಂತೆ ನನ್ನ ಲೇಖನಿಯ ಕಪ್ಪುಮಸಿ ಮಿತವಾಗಿ ಇಂಕು ಹೀರುವ ನ್ಯೂಸ್ ಪ್ರಿಂಟ್ ಕಾಗದದ ಮೇಲೆ ಮೂಡಿಸಿದ ಅಕ್ಷರಗಳು ಅಚ್ಚೊತ್ತಿದಂತೆ ಕಂಡಿರಬೇಕು. ಸಂದರ್ಶನದಲ್ಲಿ ಈ ಬಗ್ಗೆ ಪ್ರಸ್ತಾಪವೂ ಆಯಿತು. ನೌಕರಿಗೆ ಆಯ್ಕೆಯಾದ ರಾತ್ರಿ ಕನಸಿನಲ್ಲಿ ಕಾಣಿಸಿಕೊಂಡ ‘ಅನುವಾದ’ ಮತ್ತು ‘ಕಪ್ಪುಮಸಿ’ ಇಬ್ಬರೂ ‘ನನ್ನಿಂದಲೇ ನೀನು’ ಎಂದಾಗ ನಾನು ನಿರುತ್ತರ.

ಕೋವಿಡ್ ಸಂದರ್ಭದಲ್ಲಿ ದೈಹಿಕ ಆರೋಗ್ಯದ ಸಹಜ ಏರುಪೇರುಗಳು ಸಹ ಅನೇಕರಲ್ಲಿ ವಿಪರೀತ ಅನುಮಾನಗಳಿಗೆ ಕಾರಣವಾಗಿ ಭಯ ಹುಟ್ಟಿಸಿದ್ದವು. ಕೆಲ ದಿನಗಳಿಂದ ನನಗೂ ಎದೆಯಲ್ಲಿ ಏನೋ ಅಸೌಖ್ಯ ಅನುಭವ ಉಂಟಾಗುತ್ತಿತ್ತು; ಅಸಿಡಿಟಿ ಇರಬಹುದೆಂದು ನಿರ್ಲಕ್ಷಿಸುತ್ತಲೇ ಬಂದಿದ್ದೆ. ಕೊನೆಗೆ ಯಾಕೋ ರಿಸ್ಕ್ ಬೇಡ ಎಂದೆನಿಸಿ ಪರಿಚಿತ ಹೃದಯತಜ್ಞ ಮಹಾಂತೇಶ ಅವರನ್ನು ಸಂಪರ್ಕಿಸಿದೆ.

ವೈದ್ಯರು ಎದೆ ಸುತ್ತಲೂ ಹತ್ತಾರು ವೈರುಗಳನ್ನು ಅಂಟಿಸಿ ಅವುಗಳನ್ನು ಮತ್ತೊಂದು ಯಂತ್ರಕ್ಕೆ ಜೋಡಿಸಿ ಹೃದಯದ ಬಡಿತವನ್ನು ಪರದೆಯ ಮೇಲೆ ಮೂಡಿಸಿದರು. ನನ್ನ ಹೃದಯವನ್ನು ನನಗೇ ತೆರೆದು ತೋರಿಸುತ್ತಾ, ‘ನೋಡಿ, ನಿಮ್ಮ ಹೃದಯ ಎಷ್ಟೊಂದು ಚೆನ್ನಾಗಿದೆ’ ಎಂದರು. ಬದುಕಿನುದ್ದಕ್ಕೂ ಸಂದರ್ಭಕ್ಕೆ ತಕ್ಕಂತೆ ನನ್ನ ಸಂಪರ್ಕಕ್ಕೆ ಬಂದ ಎಷ್ಟೊಂದು ಜನರಿಗೆ ಹೃದಯವಂತನಾಗಿ ಅಥವಾ ಹೃದಯಹೀನನಾಗಿ ಗೋಚರಿಸಿದ್ದೇನೋ ಗೊತ್ತಿಲ್ಲ. ಆದರೆ, ಪರದೆ ಮೇಲೆ ಹೃದಯ ಕಂಡ ಅನಂತರ ನನ್ನ ಹೃದಯವನ್ನು ಯಾರೂ ಕದ್ದಿಲ್ಲ, ಸೂಕ್ತ ಸ್ಥಳದಲ್ಲಿ ಸುರಕ್ಷಿತವಾಗಿದೆ ಎಂಬುದಕ್ಕೆ ಪುರಾವೆ ಸಿಕ್ಕಿತು; ಸಹೃದಯಿ ಎಂಬುದೂ ಖಾತರಿ ಆಯ್ತು!

‘ತುಂಬು ಹೃದಯ’ದಿಂದ ಧನ್ಯವಾದ ಹೇಳಿ ಹೊರಡುವಾಗ ಮಹಾಂತೇಶ ಅವರು ಒಂದು ಚಿಕ್ಕ ಬಾಕ್ಸನ್ನು ಕೊಟ್ಟರು; ನನಗೆ ಪುರಾಣಿಕ ಡಾಕ್ಟರರ ಚೆಕ್ಕುಲಿ ಪೊಟ್ಟಣ ನೆನಪಾಯಿತು. ಕುತೂಹಲದಿಂದ ಅವರ ಎದುರೇ ಬಾಕ್ಸ್ ಬಿಚ್ಚಿದೆ. ಅದರಲ್ಲಿ ಒಂದು ಇಂಕ್ ಪೆನ್ನು ಇತ್ತು. ಸಂಕೋಚ ಬಿಟ್ಟು ಹಾಳೆಯ ಮೇಲೆ ಬರೆದು ನೋಡಿದೆ; ಅದು ಕಪ್ಪು ಮಸಿಯ ಇಂಕ್ ಪೆನ್ನು! ಇನ್ನೇನು ಇಂಕ್ ಪೆನ್ನುಗಳ ಕಾಲ ಮುಗಿದೇ ಹೋಯಿತು ಎನ್ನುವಾಗ ಈ ಪೆನ್ನು ನನ್ನ ಬದುಕಿನ ಹಿಮ್ಮುಖ ಪಯಣಕ್ಕೆ ಕಾರಣವಾಯಿತು.

## ಚಂದ್ರಕಾಂತ ವಡ್ಡು

ಮೂಲತಃ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ವಡ್ಡು ಗ್ರಾಮದವರು. ಈಗ ಬೆಂಗಳೂರಿನಲ್ಲಿ ವಾಸ. ವೃತ್ತಿಯಿಂದ ಪತ್ರಕರ್ತ. ‘ಲಂಕೇಶ್ ಪತ್ರಿಕೆ’ಯಿಂದ ವೃತ್ತಿ ಆರಂಭಿಸಿ ‘ಸಂಯುಕ್ತ ಕರ್ನಾಟಕ’ ಬಳಗದ ‘ಕಸ್ತೂರಿ’, ‘ಕರ್ಮವೀರ’ ಪತ್ರಿಕೆಗಳಲ್ಲಿ ಉಪ ಸಂಪಾದಕರಾಗಿದ್ದರು. ಸ್ವತಂತ್ರವಾಗಿ ‘ಬಿಸಿಲ ಬದುಕು’ ಮಾಸಿಕ ಮತ್ತು ‘ದಾರಿ’ ವಾರಪತ್ರಿಕೆಗಳ ಸಂಪಾದನೆ, ಪ್ರಕಟಣೆಯ ಹೊಣೆ. ‘ನಾರಿಹಳ್ಳದ ದಂಡೆಯಲ್ಲಿ’ (ಪ್ರಕಟಿತ ಕಥಾಸಂಕಲನ). ‘ಮಹಾತ್ಮಾ ಗಾಂಧಿ’ ಕುರಿತ ಅನುವಾದಿತ ಕೃತಿ ಪ್ರಕಟಿಸಿದ್ದಾರೆ. ‘ನೇಪಥ್ಯದ ನೋವು’ ಕತೆಗೆ ‘ಪ್ರಜಾವಾಣಿ’ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಪ್ರಸ್ತುತ ಬೆಂಗಳೂರಿನಿಂದ ಪ್ರಕಟವಾಗುತ್ತಿರುವ ‘ಚಿಂತನಶೀಲ ಸಮಾಜಮುಖಿ’ ಮಾಸಪತ್ರಿಕೆಯ ಸಂಪಾದಕ.